**<u>ದಿ:-08-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟಿಸವಾಲು : ಪ್ರತಿವಾದಿ ಪರ ಶ್ರೀ. ಎಂ.ಪಿ ವಕೀಲರಿಂದ :</u>**

ನಾನು ಕ್ರಿಮಿನಲ್ ಅಪೀಲು 32/2019 ವಜಾವಾದ ತರುವಾಯ ನಾನು ನ್ಯಾಯಾಲಯಕ್ಕೆ ರೂ.2,30,000/-ವನ್ನು ಪಾವತಿ ಮಾಡಿದ್ದೇನೆ ಎಂದರೆ ಸರಿ. ಈ ಹಣವನ್ನು ಪಾವತಿ ಮಾಡುವ ಸಂದರ್ಭದಲ್ಲಿ ಪ್ರಸ್ತುತ ಈ ಪ್ರಕರಣವು ಚಾಲ್ತಿಯಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನನಗೆ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಿಮಿನಲ್ ಅಪೀಲು 32/2019 ವಜಾವಾದ ನಂತರ ನಾನು ಮತ್ತು ನನ್ನ ಹೆಂಡತಿ ಆ ಆದೇಶದ ವಿರುದ್ಧ ನಾನು ಮೇಲ್ಮನವಿಯನ್ನು ಸಲ್ಲಿಸಿಲ್ಲ ಕಾರಣ ಹೆಚ್ಚಿನ ಹಣವನ್ನು ನಾನು ನನ್ನ ಖಾತೆಯಿಂದ ಪಾವತಿ ಮಾಡಿರುವುದೇ ಆಗಿರುತ್ತದೆ.

ನಿ.ಪಿ.9 ರಿಂದ 11 ರಂತೆ ಫ್ಯಾಬ್ರಿಕೇಷನ್ ಕೆಲಸಗಳನ್ನು ಮಾಡಬೇಕೆಂದು 1 ನೇ ಪ್ರತಿವಾದಿಗೆ 3 ನೇ ವಾದಿಯವರು ಆರ್ಡರ್ ಇಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಇನ್ ವಾಯ್ಸ್ ನ್ನು ಜಾಸ್ತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.9 ರಿಂದ 11 ಕ್ಕೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯವರು 3 ನೇ ವಾದಿಯ ಮೇಲೆ ಸಿ.ಸಿ. ನಂ.8292/2016 ರಂತೆ ಚೆಕ್ ಅಮಾನ್ಯ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸಾಕ್ಷಿಯು ನಾವು ಸ್ಟಾಪ್ ಪೇಮೆಂಟ್ ಮಾಡಿದ ನಂತರ ಈ ದಾಖಲೆಗಳನ್ನು ಅವರು ಸೃಷ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 12 ಚೆಕ್ಕುಗಳನ್ನು ಕೊಟ್ಟ ಬಗ್ಗೆ ವಿವರಗಳನ್ನು ತೋರಿಸಿದ್ದು ಅಂತಹ ಚೆಕ್ಕುಗಳನ್ನು ನಾನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರ ಮತ್ತು ಸಾಕ್ಷ್ಯದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಒಟ್ಟಾಗಿ ರೂ.7,50,000/-ವನ್ನು ನನಗೆ ನೀಡಬೇಕೆಂದು ತಿಳಿಸಿದ್ದು ಅದು ಸುಳ್ಳು ಎಂದರೆ ಸರಿಯಲ್ಲ.

ನಿ.ಪಿ.6 ರಿಂದ 8 ಕ್ಕೂ 1 ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.12 ಬ್ಯಾಂಕ್ ಸ್ಟೇಟ್ ಮೆಂಟ್ ಗೂ 1 ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.1 ಪಾಲುದಾರಿಕೆ ಪತ್ರದ ಬಗ್ಗೆ ನಾನು 1 ನೇ ಪ್ರತಿವಾದಿಗೆ ನೀಡಿದ ಪ್ರತ್ಯುತ್ತರ ಪತ್ರ ನಿ.ಪಿ.5 ರಲ್ಲಿ ಈ ಬಗ್ಗೆ ನಮೂದು ಮಾಡಿಲ್ಲ ಮತ್ತು ಅದೇ ರೀತಿ ಸಿ.ಸಿ.8292/2016 ರಲ್ಲೂ ಈ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾವು ಆರ್ಡರ್ ಪ್ಲೇಸ್ ಮಾಡಿದಂತೆ ಪ್ರತಿವಾದಿಗಳು ರೂ.9,45,000/-ದ ಕೆಲಸ ಮಾಡಲಿಲ್ಲ ಬದಲಾಗಿ ರೂ.3,32,000/-ಕ್ಕೆ ಮಾತ್ರ ಕೆಲಸವನ್ನು ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವೆಯನ್ನು ಹಾಕಿದಂತೆ ನನಗೆ ಪ್ರತಿವಾದಿಗಳು ಯಾವುದೇ ರೀತಿಯ ಹಣವನ್ನು ಕೊಡಲು ಭಾದ್ಯರಿಲ್ಲ ಮತ್ತು ನನ್ನ ಹೆಂಡತಿ 3 ನೇ ವಾದಿಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿದ ಕಾರಣಕ್ಕಾಗಿ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ರೂ.3,32,000/-ದಷ್ಟೇ ಕೆಲಸ ಮಾಡಿದ್ದಾರೆ ಎಂಬ ಬಗ್ಗೆ ಬೇರೆಯವರಿಂದ ಮೌಲ್ಯ ಮಾಪನ ಮಾಡಿಸಿ ಅದರ

ವರದಿಯನ್ನು ಪಡೆದು ಮತ್ತು ಆ ಕೆಲಸ ಕಾರ್ಯಗಳ ಬಗ್ಗೆ ಛಾಯಾ ಚಿತ್ರವನ್ನು ಪಡೆದು ನ್ಯಾಯಾಲಯಕ್ಕೆ ಹಾಕಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ದಾಖಲೆಯನ್ನು ಪಡೆದಿದ್ದೇನೆ ಆದರೆ ಹಾಕಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಬೇರೆ ಕೆಲಸ ಕಾರ್ಯಗಳಿಗೆ 2 ನೇ ಪ್ರತಿವಾದಿಯಿಂದ ಸರಕುಗಳನ್ನು ಪಡೆದು ಅದರ ಬಿಲ್ಲುಗಳನ್ನು ಈ ದಾವೆಯಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಲೋಕೇಶ್ ರವರು 2 ನೇ ಪ್ರತಿವಾದಿಯವರ ಅಕೌಂಟಿಗೆ ದುಡ್ಡು ಹಾಕಲು ಹೇಳಿದಂತೆ ನಾನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

ರೂ.9,45,000/-ರಲ್ಲಿ 3 ನೇ ವಾದಿಯವರು ರೂ.8,30,000/- ಪಾವತಿ ಮಾಡಿದ್ದು ಉಳಿಕೆ ರೂ.1,15,000/-ವನ್ನು ಪಾವತಿ ಮಾಡಬೇಕೆಂದು ಹೇಳಿ 1 ನೇ ಪ್ರತಿವಾದಿಯವರು 3 ನೇ ವಾದಿಯವರ ಮೇಲೆ ಎಸ್.ಸಿ.447/2019 ರಂತೆ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕರಣ ಚಾಲ್ತಿಯಲ್ಲಿದ್ದರೂ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಆ ಪ್ರಕರಣವನ್ನು ಬಡ್ಡಿಯ ಮೇಲೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಕೊಟ್ಟಿರುವಂತಹ ಬಿಲ್ಲುಗಳು ನಿ.ಪಿ.6 ರಿಂದ 8 ಮತ್ತು 12 ಬ್ಯಾಂಕ್ ಸ್ಟೇಟ್ ಮೆಂಟುಗಳು 1 ನೇ ಪ್ರತಿವಾದಿಗೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿದಂತೆ 1 ಮತ್ತು 2 ನೇ ಪ್ರತಿವಾದಿಗಳು ನಮಗೆ ಹಣ ಕೊಡಲು ಬಾಧ್ಯರಲ್ಲ ಮತ್ತು ನಾನು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ :</u>** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**